ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳವರ ನ್ಯಾಯಾಲಯ, ಶಿಡ್ಲಘಟ್ಟ.

ದಿನಾಂಕಃ 12ನೇ ನವೆಂಬರ್ - 2019

- ಉಪಸ್ಥಿತರು -

ಶ್ರೀಮತಿ ರೋಹಿಣಿ.ಡಿ, ಬಿ.ಎ., ಎಲ್ ಎಲ್.ಬಿ.,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಶಿಡ್ಲಘಟ್ಟ.

ಅಸಲು ದಾವೆ ಸಂಖ್ಯೆ: 66 /2018

ವಾದಿಗಳು :1. ಶ್ರೀಮತಿ. ಬಿ.ಕೆ. ಮಂಜುಳ
ಕೊಂ ಲೇಟ್ ನಾರಾಯಣಚಾರಿ,
ವಯಸ್ಸು ಸುಮಾರು 40 ವರ್ಷ,

2. ಶ್ರೀ. ಬಿ.ಎನ್. ಅರುಣ್‌ಕುಮಾರ್
ಬಿನ್ ಲೇಟ್ ನಾರಾಯಣಚಾರಿ
ಬಿನ್ ಬಿ.ಕೆ. ಮಂಜುಳ
ವಯಸ್ಸು ಸುಮಾರು 20 ವರ್ಷ,

3. ಶ್ರೀ. ಬಿ.ಎನ್. ಕಿರಣ್‌ಕುಮಾರ್
ಲೇಟ್ ನಾರಾಯಣಚಾರಿ,
ಬಿನ್ ಬಿ.ಕೆ. ಮಂಜುಳ,
ವಯಸ್ಸ ಸುಮಾರು 17 ವರ್ಷ,
ಅಪ್ರಾಪ್ತರ ಪರ ತಾಯಿ ಮಂಜುಳ
1ನೇ ವಾದಿ,

ಎಲ್ಲರ ವಾಸಃ ಬೈರಸಂದ್ರ ಗ್ರಾಮ,
ಜಂಗಮಕೋಟೆ ಹೋಬಳಿ,
ಶಿಡ್ಲಘಟ್ಟ ತಾಲ್ಲೂಕು.

(ಪ್ರತಿನಿಧಿಸಿದವರು ಶ್ರೀ.ಬಿ.ಎನ್.ವಿ ವಕೀಲರು)

- ವಿರುದ್ಧ -

ಪ್ರತಿವಾದಿ : 1. ಶ್ರೀ. ಸೂರ್ಯನಾರಾಯಣಚಾರಿ
ಬಿನ್ ಲೇಟ್ ಹನುವಂತಾಚಾರಿ,
ವಯಸ್ಸು ಸುಮಾರು 68 ವರ್ಷ,
ವಾಸಃ ಬೈರಸಂದ್ರ ಗ್ರಾಮ,
ಜಂಗಮಕೋಟೆ ಹೋಬಳಿ,
ಶಿಡ್ಲಘಟ್ಟ ತಾಲ್ಲೂಕು.

(ಪ್ರತಿವಾದಿ ಪರ ಪ್ರತಿನಿಧಿಸಿದವರು ಶ್ರೀ.ಡಿ.ಎ.ಎ ವಕೀಲರು)

--- ---- ---- ----

ಮಧ್ಯಂತರ ಅರ್ಜಿ ಸಂಖ್ಯೆ:3 ರ ಮೇಲೆ ಆದೇಶ

ವಾದಿಗಳು ಪ್ರತಿವಾದಿಯ ವಿರುದ್ಧ ದಿವಾನಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ, ದಾವಾ ಇತ್ಯರ್ಥ್ಯವಾಗುವ ತನಕ ದಾವಾ ಐಟಂ ನಂ.1 ರಲ್ಲಿರುವ ಮರಗಳನ್ನು ಕಟಾವು ಮಾಡದಂತೆ ಮತ್ತು ತೆಗದುಹಾಕದಂತೆ ಪ್ರತಿವಾದಿಯ ವಿರುದ್ಧ ತಾತ್ಕಲಿಕ ನಿರ್ಭಂಧಕಾಜ್ಞೆಯನ್ನು ಕೋರಿರುತ್ತಾರೆ.

2. ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ, ಹನುಮಂತಾಚಾರಿ ಮತ್ತು ಅವರ ಪತ್ನಿ ನಂಜಮ್ಮ ಮೃತಪಟ್ಟಿದ್ದು, ಅವರಿಗೆ ಮುನಿಲಕ್ಷಮ್ಮ, 1ನೇ ಪ್ರತಿವಾದಿ, ನಾಗಾಚಾರಿ, ಸಂಜೀವಾಚಾರಿ, ಶಾಂತಮ್ಮ, ವೆಂಕಟಾಚಾರಿ ಮತ್ತು ನಾರಾಯಣಚಾರಿ ಎಂಬ ಮಕ್ಕಳಿರುತ್ತಾರೆ. ವಾದಿಗಳು ನಾರಾಯಣಚಾರಿ ರವರ ವಾರಸುದಾರರಾಗಿರುತ್ತಾರೆ. ಹನುಮಂತಾಚಾರಿ ರವರ ಜೀವಿತಾವಧಿಯಲ್ಲಿ ಹನುಮಂತಾಚಾರಿ ರವರ ಸ್ವತ್ತುಗಳನ್ನು ಅವರ ಮಕ್ಕಳೆಲ್ಲರೂ ಮೌಖಿಕವಾಗಿ ವಿಭಾಗ ಮಾಡಿಕೊಂಡು ಬೇರೆ ಬೇರೆ ಸ್ಥಳದಲ್ಲಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ. ಆದೆರ ಪ್ರತಿವಾದಿ ಮತ್ತು ನಾರಾಯಣಚಾರಿ ರವರು ಜಂಟಿಯಾಗಿ ವಾಸಮಾಡುತ್ತಿರುತ್ತಾರೆ. ದಾವಾ ಐಟಂ ನಂ.1 ಸರ್ಕಾರದಿಂದ ಪ್ರತಿವಾದಿಗೆ ಮಂಜೂರಾಗಿರುತ್ತದೆ. ನಾರಾಯಣಚಾರಿ ರವರ ಸಮ್ಮತಿ ಮೇರೆಗೆ ಸದರಿ ಸ್ವತ್ತಿನ ಮುಟೇಷನ್ ಕೂಡ ಪ್ರತಿವಾದಿ ಹೆಸರಿಗೆ

ವರ್ಗಾವಣೆಯಾಗಿದ್ದು, ಒಟ್ಟು ಕುಟುಬಂದ ನಿಧಿಯಿಂದ ಕಿಮ್ಮತ್ತು ಮತ್ತು ರೆವಿನ್ಯೂಗಳನ್ನು ಪಾವತಿಸಿರುತ್ತಾರೆ. ದಾವಾ ಐಟಂ ನಂ.2ನ್ನು ಪ್ರತಿವಾದಿ ಮತ್ತು ನಾರಾಯಣಚಾರಿ ರವರು ಜಂಟಿಯಾಗಿ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದು, ಮುಟೇಷನ್ ಕೂಡ ಪ್ರತಿವಾದಿ ಮತ್ತು ನಾರಾಯಣಚಾರಿ ರವರ ಹೆಸರಿನಲ್ಲಿ ಎಂ.ಆರ್.ನಂ. 2/1989-90 ರಂತೆ ಜಂಟಿಯಾಗಿರುತ್ತದ್ದೆ ನಾರಾಯಣಚಾರಿ ಮತ್ತು ಪ್ರತಿವಾದಿ ಒಟ್ಟು ಕುಟುಂಬದ ಸದಸ್ಯರಾಗಿ ದಾವಾ ಸ್ವತ್ತುಗಳ ಜಂಟಿ ಸ್ವಾಧೀನಾನುಭೋಗದಲ್ಲಿರುತ್ತಾರೆ ಮತ್ತು ಪ್ರತಿವಾದಿ ಒಟ್ಟು ಕುಟುಬಂದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುತ್ತಾರೆ. ದಾವಾ ಐಟಂ ನಂ.1 ರಲ್ಲಿ ಪ್ರತಿವಾದಿ ಮತ್ತು ವಾದಿಗಳೆಲ್ಲರೂ ಜಂಟಿಯಾಗಿ ನೀಲಗಿರಿ ಮರಗಳನ್ನು ಬೆಳೆದಿದ್ದು, ಜಂಟಿಯಾಗಿ ಅನುಭೋಗಿಸುತ್ತಿರುತ್ತಾರೆ. ನಾರಾಯಣಚಾರಿ ರವರ ಮರಣಾನತಂರ ಪ್ರತಿವಾದಿಯು ವಾದಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುತ್ತಾರೆ. ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಕೆಲವು ದಾಖಲೆಗಳನ್ನು ಸೃಷ್ಟಿಸಲು ಪ್ರಯತ್ನಿಸಿರುತ್ತಾರೆ ಮತ್ತು 3ನೇ ವ್ಯಕ್ತಿಗೆ ದಾವಾ ಸ್ವತ್ತುಗಳನ್ನು ವಾದಿಗಳ ಗಮನೆಕ್ಕ ಬಾರದಂತೆ ಮಾರಾಟ ಮಾಡಲು ಪ್ರಯತ್ನಿಸುತ್ತಿರುತ್ತಾರೆ ದಾವಾ ಐಟಂ ನಂ.1 ರಲ್ಲಿನ ನೀಲಗಿರಿ ಮರಗಳನ್ನು ಕಟಾವು ಮಾಡಲು, ತೆಗೆದು ಹಾಕಲು ಪ್ರಯತ್ನಿಸುತ್ತಿರುತ್ತಾರೆ. ಪ್ರತಿವಾದಿಯು ವಾದಿಗಳಿಗೆ ಸೇರಿದ ಹಿಸ್ಸೆಯನ್ನು ತಪ್ಪಿಸಲು ಮತ್ತು ಅಕ್ರಮ ಲಾಭ ಹೊಂದಲು ಪ್ರಯತ್ನಿಸುತ್ತಿರುತ್ತಾರೆ. ಈ ವಿಚಾರ ತಿಳಿದ ನಂತರ ವಾದಿಗಳು ಒಟ್ಟು ಕುಟುಂಬದಲ್ಲಿ ಮುಂದುವರಿಯುವುದು ಸೂಕ್ತವಿಲ್ಲವೆಂದು ನಿರ್ಧರಿಸಿ ತಮ್ಮ ಹಿಸ್ಸೆಯನ್ನು ವಿಭಾಗ ಮಾಡಿಕೊಡುವಂತೆ ಕೇಳಿದಾಗ ನಿರಾಕರಿಸಿರುತ್ತಾರೆ. ಈ ಬಗ್ಗೆ ಹಲವಾರು ಪಂಚಾಯ್ತಿಗಳನ್ನು ಮಾಡಿದರು ಯಾವುದೇ ಪ್ರಯೋಜನ ಆಗಿರುವುದಿಲ್ಲ. ಆದ್ದರಿಂದ, ವಾದಿಯು ಅನ್ಯಮಾರ್ಗವಿಲ್ಲದೆ ಈ ದಾವೆಯನ್ನು ಸಲ್ಲಿಸಿದ್ದು, ಮದ್ಯಂತರ ಅರ್ಜಿಯನ್ನು ಕೋರಿ ಪುರಸ್ಕರಿಸಬೇಕಾಗಿ ಕೋರಿರುತ್ತಾರೆ.

3. ಪ್ರತಿವಾದಿಯು ಮಧ್ಯಂತರ ಅರ್ಜಿ-2ಕ್ಕೆ ತಮ್ಮ ತಕರಾರನ್ನು ಸಲ್ಲಿಸಿದ್ದು, ವಾದಿಯ ನಿಲುವನ್ನು ಸಂಪೂರ್ಣವಾಗಿ ಅಲ್ಲಗೆಳೆದಿರುತ್ತಾರೆ. ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಐಟಂ ನಂ.1 ಪ್ರತಿವಾದಿಗೆ ಸರ್ಕಾರದಿಂದ ಮಂಜೂರಾಗಿದ್ದು, ದಿನಾಂಕಃ 17.07.1980 ರಂದು

ತಹಸೀಲ್ದಾರ್ ರವರು ಪ್ರತಿವಾದಿಗೆ ಸಾಗುವಳಿ ಚೀಟಿಯನ್ನು ವಿತರಿಸಿರುತ್ತಾರೆ. ಸದರಿ ಸಾಗುವಳಿ ಚೀಟಿಯ ಆಧಾರದ ಮೇಲೆ ಖಾತೆಯು ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ. 1980ನೇ ಇತವಿಯಿಂದ ದಾವಾ ಐಟಂ ನಂ.1 ರಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆ ಮತ್ತು ಖಾತೆ ಕೂಡ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ದಾವಾ ಐಟಂ.2 ನ್ನು ಪ್ರತಿವಾದಿಯು ದಿನಾಂಕಃ 21.09.1984 ರ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ. 1975-76 ನೇ ಸಾಲಿನಲ್ಲಿ ಪ್ರತಿವಾದಿ ಮತ್ತು ಅವರ ಸಹೋದರ ನಾರಾಯಣಚಾರಿ ರವರು ತಮ್ಮ ಒಟ್ಟು ಕುಟುಂಬದ ಸ್ವತ್ತುಗಳನ್ನು ಪಂಚಾಯ್ತಿದಾರರ ಸಮಕ್ಷಮ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ. 1975-76 ರಿಂದ ಎಲ್ಲಾ ಸಹೋದರರು ತಮ್ಮ ಕುಟುಂಬದೊಂದಿಗೆ ಪ್ರತ್ಯೇಕವಾಗಿ ವಾಸಮಾಡುತ್ತಿರುತ್ತಾರೆ. ಸದರಿ ಮೌಖಿಕ ವಿಭಾಗದಲ್ಲಿ ಸರ್ವೆ ನಂ. 14/1 ರಲ್ಲಿನ 0-14 ಗುಂಟೆ ವಿಸ್ತೀರ್ಣ ಮೃತ ನಾರಾಯಣಚಾರಿ ರವರ ಹಿಸ್ಸೆಗೆ ಬಂದಿದ್ದು, ಅವರೇ ಸ್ವಾಧೀನದಲ್ಲಿರುತ್ತಾರೆ. ಆದರೆ ಸದರಿ ಸ್ವತ್ತಿನ ಖಾತೆಯು ಇದುವರೆಗೂ ಮೃತ ನಾರಾಯಣಚಾರಿ ರವರ ಹೆಸರಿಗೆ ವರ್ಗಾವಣೆಯಾಗಿರುವುದಿಲ್ಲ, ನಾರಾಯಣಚಾರಿ ರವರು 2004 ನೇ ಇಸವಿಯಲ್ಲಿ ಮೃತಪಟ್ಟಿದ್ದು, ಅವರ ಮರಣಾನಂತರ ವಾದಿಗಳು ಸದರಿ ಸ್ವತ್ತಿನ ಸ್ವಾಧೀನದಲ್ಲಿರುತ್ತಾರೆ. ದಾವಾ ಐಟಂ.1 ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, 1988-89 ರಲ್ಲಿ ಸಾಲಿನಲ್ಲಿ ಪ್ರತಿವಾದಿಯು ಜಂಗಮಕೋಟೆ SFSCS ಬ್ಯಾಂಕಿನಿಂದ ಲೋನ್ ಪಡೆದಿರುತ್ತಾರೆ. ಕ್ರಯಪತ್ರದಲ್ಲಿ ಫೋರ್ಜರಿ ಮಾಡುವ ಮೂಲಕ 1ನೇ ವಾದಿಯ ಗಂಡನಾದ ನಾರಾಯಣಚಾರಿ ತನ್ನ ಹೆಸರನ್ನು ಸಹ ಸೇರಿಸಿರುತ್ತಾರೆ. ನಂತರ ಈ ಫೋರ್ಜರಿ ಮಾಡಲಾದ ದಾಖಲಾತಿ ಮೂಲಕ ದಾವಾ ಐಟಂ ನಂ.2 ರಲ್ಲಿ ತನಗೆ ಹಕ್ಕಿದೆ ಎಂದು ಕ್ಲೈಮು ಮಾಡುತ್ತಿರುತ್ತಾರೆ. ಆದರೆ ವಾದಿಗಳಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದಿದ್ದರೂ ಪ್ರತಿವಾದಿಯ ವಿರೋಧಿಗಳ ಮಾತು ಕೇಳಿ ಅಕ್ರಮ ಲಾಭ ಹೊಂದುವ ಉದ್ದೇಶದಿದಂದ ಈ ದಾವೆಯನ್ನು ಹೂಡಿರುತ್ತಾರೆ. ಆದುದರಿಂದ ವಾದಿಯು ಸಲ್ಲಿಸಿರುವ ಮದ್ಯಂತರ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿರುತ್ತಾರೆ.

4. ಉಭಯಪಕ್ಷಗಾರರ ವಾದವನ್ನು ಆಲಿಸಲಾಯಿತು. ಉಭಯಪಕ್ಷಗಾರರ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಮೇಲ್ಕಂಡ ಅರ್ಜಿಯ ಮತ್ತು ತಕರಾರಿನ ಅಂಶಗಳನ್ನು ಪರಿಗಣಿಸಿದಾಗ, ಈ ಕೆಳಂಡಂತಹ ಅಂಶಗಳು ಉದ್ಭವಿಸುತ್ತವೆ.

## ಅಂಶಗಳು

1. ವಾದಿಗಳು ತಮಗೆ ಮೇಲ್ನೋಟಕ್ಕೆ ಸಾಬೀತಾಗುವಂತಹ ದಾವೆ ಇರುತ್ತದೆ ಎಂದು ಸಾಬೀತು ಪಡಿಸುವರೇ?
2. ವಾದಿಗಳು ತನ್ನ ಪರವಾಗಿ ಅನುಕೂಲತೆ ಒಲವು ಇರುತ್ತದೆ ಎಂದು ಸಾಬೀತುಪಡಿಸುವರೇ?
3. ವಾದಿಗಳಿಗೆ ಮಧ್ಯಂತರ ಅರ್ಜಿ ತಿರಸ್ಕರಿಸಪಟ್ಟಲ್ಲಿ ಅಪರಿಹಾರವಾದ ನಷ್ಟ ಉಂಟಾಗುತ್ತದೆ ಎಂದು ಸಾಬೀತುಪಡಿಸುವರೇ?
4. ಆದೇಶ ಏನು?

6. ಮೇಲೆ ಕಾಣಿಸಿದ ಅಂಶಗಳಿಗೆ ನಾನು ಈ ಕೆಳಕಂಡತೆ ಉತ್ತರಿಸಿದ್ದೇನೆಃ

ಅಂಶಃ1 ಃ ನಕಾರಾತ್ಮಕವಾಗಿ
ಅಂಶಃ2 ಃ ನಕಾರಾತ್ಮಕವಾಗಿ
ಅಂಶಃ3 ಃ ನಕಾರಾತ್ಮಕವಾಗಿ
ಅಂಶಃ4 ಃ ಅಂತಿಮ ಆದೇಶದಂತೆ

## ಕಾರಣಗಳು

7. ಅಂಶಃ1ಃ ವಾದಿಗಳು ಪ್ರತಿವಾದಿಯ ವಿರುದ್ದ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ಈ ದಾವೆಯನ್ನು ತಂದಿರುತ್ತಾರೆ. ವಾದಿಗಳು ತಮ್ಮ ನಿಲುವನ್ನು ಸಾಬೀತುಪಡಿಸಲು ಈ ಕೆಳಕಂಡ ದಾಖಲೆಗಳಾದ ವಂಶವೃಕ್ಷ, ಪಹಣಿಗಳು, ಕ್ರಯಪತ್ರದ ದೃಡೀಕೃತ ನಕಲು, ಪಡಿತರ ಚೀಟಿ ಮತ್ತು ಫೋಟೋಗಳನ್ನು ಹಾಜರುಪಡಿಸಿರುತ್ತಾರೆ. ಪ್ರತಿವಾದಿಯು ತಮ್ಮ ನಿಲುವನ್ನು ಸಾಬೀತು ಪಡಿಸಲು ದಾಖಲೆಗಳಾದ ಗ್ರಾಂಟ್ ಸರ್ಟಿಫಿಕೇಟ್ ನಕಲು ಪ್ರತಿ ಮತ್ತು ಫೋಟೋಗಳನ್ನು ಹಾಜರುಪಡಿಸಿರುತ್ತಾರೆ.

8. ವಾದಿಯು ಹಾಜರುಪಡಿಸಿರುವ ದಾಖಲಾತಿಗಳನ್ನು ಪರೀಶಿಲಿಸಲಾಗಿ, 2017-2018ನೇ ಸಾಲಿನ ಪಹಣಿಗಳಲ್ಲಿ ದಾವಾ ಐಟಂ.1 ಕಾಲಂ ನಂ.9 ಮತ್ತು ಕಾಲಂ ನಂ.12 ರಲ್ಲಿ ಪ್ರತಿವಾದಿಯ ಹೆಸರಿರುತ್ತದೆ ಮತ್ತು ಪ್ರತಿವಾದಿಯು SFSCS ಬ್ಯಾಂಕಿಗೆ ಆಧಾರ ಮಾಡಿರುವುದಾಗಿ ನಮೂದಿರುತ್ತದೆ. 2016-2017 ನೇ ಸಾಲಿನ ಪಹಣಿಗಳಲ್ಲಿ ದಾವಾ ಐಟಂ.2 ಕಾಲಂ.9 ಮತ್ತು ಕಾಲಂ ನಂ.12 ರಲ್ಲಿ ಪ್ರತಿವಾದಿ ಮತ್ತು ನಾರಾಯಣಚಾರಿ ರವರ ಹೆಸರಿನಲ್ಲಿರುತ್ತದೆ. ದಿನಾಂಕಃ 21.09.1984 ರ ದೃಡೀಕೃತ ಕ್ರಯಪತ್ರದಲ್ಲಿ ಪ್ರತಿವಾದಿ ಮತ್ತು ನಾರಾಯಣಾಚಾರಿ ರವರು ದಾವಾ ಐಟಂ ನಂ. 2 ಸರ್ವೆ ನಂಬರ್. 8/1 ರಲ್ಲಿ 0-17 ಗುಂಟೆಯನ್ನು ತೋಪಣ್ಣ ಮತ್ತು ಅವರ ಕುಟುಂಬದದಿಂದ ಖರೀದಿಸಿರುತ್ತಾರೆ. ರೇಷನ್ ಕಾರ್ಡ್‌ನಲ್ಲಿ 1981 ರಿಂದ 1986ನೇ ಸಾಲಿನವರೆಗೆ ಹನುಮಂತಾಚಾರಿ ರವರ ಕುಟುಂಬದವರ ಸದಸ್ಯರ ಹೆಸರುಗಳಲ್ಲಿ ಪ್ರತಿವಾದಿ ಮತ್ತು ನಾರಾಯಣಚಾರಿ ರವರ ಹೆಸರು ನಮೂದಿರುತ್ತದೆ. ಫೋಟೋಗಳಲ್ಲಿ ಕಲ್ಲುಗಳನ್ನು ಇಟ್ಟಿದ್ದು, ಪಾಯ ಹಾಕಿರುವುದು ಕಂಡು ಬಂದಿರುತ್ತದೆ. ಪ್ರತಿವಾದಿಯು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಗ್ರಾಂಟ್ ಸರ್ಟಿಫಿಕೇಟಿನಲ್ಲಿ ದಾವಾ ಐಟಂ ನಂ.1 ಪ್ರತಿವಾದಿ ಹೆಸರಿಗೆ ದಿನಾಂಕಃ 17.07.1980 ರಂದು ಮಂಜೂರಾಗಿರುತ್ತದೆ ಮತ್ತು ಫೋಟೋಗಳಲ್ಲಿ ಗಿಡಗಳನ್ನು ಬೆಳೆಸಿರುವುದು ಕಂಡು ಬಂದಿರುತ್ತದೆ.

9. " ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 133 ರಲ್ಲಿ ಈ ಕೆಳಕಂಡತಿದೆ.

"ಕಲಂ.133 ದಾಖಲೆಗಳಲ್ಲಿರುವ ನಮೂದುವಿಕೆಗಳ ಸಂಬಂಧಿಸಿದಂತೆ ಪೂರ್ವಭಾವನೆ

ಹಕ್ಕುಗಳ ದಾಖಲೆ ಮತ್ತು ಪೋಡಿಗಳ ರಿಜಿಸ್ಟರ್‌ನಲ್ಲಿರುವ ( ಅಥವಾ ಒಂದು ಪಟ್ಟಾ ಪುಸ್ತಕ) ದಲ್ಲಿರುವ ಒಂದು ಪ್ರಮಾಣಿತ ನಮೂದುವಿಕೆಗಳನ್ನು ಕುರಿತು, ವಿರೋದಾಭಿಪ್ರಾಯವು ಸಾಬೀತುಗೊಳ್ಳುವ ಮೇರೆಗೆ ಅಥವಾ ಅದಕ್ಕಾಗಿ ಕಾನೂನು ಸಿಮೀತವಾಗಿ ಒಂದು ಹೊಸ ನಮೂದುವಿಕೆಯನ್ನು ಬದಲಿ ಸೇರ್ಪಡೆ ಮಾಡುವವರಿಗೆ ಸತ್ಯವೆಂಬುದಾಗಿ ಪೂರ್ವಭಾವನೆ ಮಾಡತಕ್ಕದ್ದು"

10. ಸದರಿ ವ್ಯಾಖ್ಯಾನದ ರೀತಿಯಲಿ ಉಭಯಪಕ್ಷಕಾರರು ಹಾಜರುಪಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ದಾವಾ ಐಟಂ ನಂ.1 ಪ್ರತಿವಾದಿಯ ಹೆಸರಿನಲ್ಲಿದ್ದು,

ಪ್ರತಿವಾದಿಯೇ ಸ್ವಾಧೀನದಲ್ಲಿರುವುದಾಗಿ ಕಂಡು ಬಂದಿರುತ್ತದೆ. ಆದರೆ ದಾವಾ ಐಟಂ ನಂ.2 ಪ್ರತಿವಾದಿ ಮತ್ತು ನಾರಾಯಣಚಾರಿ ಇಬ್ಬರ ಹೆಸರಿನಲ್ಲಿಯೂ ಇರುತ್ತದೆ. ವಾದಿಯು ಹಾಜರುಪಡಿಸಿರುವ ದಾಖಲಾತಿಗಳಿಂದ ತಮಗೆ ಮೇಲ್ನೋಟಕ್ಕೆ ಸಾಬೀತಾಗುವಂತಹ ದಾವೆ ಇರುವುದಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುವುದರಿಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

11. ಅಂಶ2 ಮತ್ತು 3 ಃ ವಾದಿಗಳು ತಮಗೆ ಮೇಲುನೋಟಕ್ಕೆ ಸಾಬೀತಾಗುವ ದಾವೆ ಇರುವುದಾಗಿ ಸಾಬೀತುಪಡಿಸುವಲ್ಲಿ ವಿಫಲರಾಗಿರುವ ಕಾರಣ ಅಂಶ-2 ಮತ್ತು 3ನ್ನು ಉತ್ತರಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಆದ್ದರಿಂದ ಅಂಶ-2 ಮತ್ತು 3ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

12. ಅಂಶಃ4 ಃ ಅಂಶ-1 ರಿಂದ 3 ರಲ್ಲಿ ಚರ್ಚಿಸಿದ ಕಾರಣಗಳಿಂದಾಗಿ ನಾನು ಈ ಕೆಳಕಂಡಂತೆ ಆದೇಶ ನೀಡುತ್ತಿದ್ದೇನೆ.

## ಆದೇಶ

ವಾದಿಗಳ ದಿವಾನಿ ಪ್ರಕ್ರಿಯಾ ಸಂಹಿತೆ ಆದೇಶ 39 ನಿಯಮ 1 ಮತ್ತು 2 ರ ರೀತ್ಯಾ ಸಲ್ಲಿಸಿದ ಮಧ್ಯಂತರ ಅರ್ಜಿ-3 ನ್ನು ವಜಾಗೊಳಿಸಿದೆ.

*ಖರ್ಚಿನ ಬಗ್ಗೆ* ಆದೇಶವಿರುವುದಿಲ್ಲ.

(ಶೀಘ್ರಲಿಪಿಗಾರರಿಗೆ ಕಂಪ್ಯೂಟರಿನಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟಿದ್ದು, ಅವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 12ನೇ ನವೆಂಬರ್ -2019 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

( ಶ್ರೀಮತಿ. ರೋಹಿಣಿ.ಡಿ)<br>
ಅಪರ ಸಿವಿಲ್ ನ್ಯಾಯಾಧೀಶರು<br>
ಮತ್ತು ಜೆ.ಎಂ.ಎಫ್.ಸಿ., ಶಿಡ್ಲಘಟ್ಟ.

ಜಿ